ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 6412/2022 ಸಿ.ಡಬ್ಲ್ಯೂ –01 ಪಿ.ಡಬ್ಲ್ಯೂ -01

| | | |
|---|---|---|
| ಹೆಸರು | ಃ | ಮುಕ್ತಾಬಾಯಿ |
| ತಂದೆ | ಃ | ಚಂದ್ರಕಾಂತ |
| ವಯಸ್ಸು | ಃ | ೪೫ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಸಾವಳೇಶ್ವರ |

ದಿನಾಂಕಃ ೩೧.೦೫.೨೦೨೪
ಸತ್ಯ ಪ್ರತಿಜ್ಞೆಯ ಮೇರೆ ಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-4 ನನ್ನ ಗಂಡ, ಚಾಸಾ-2, 3, 5 ರಿಂದ 9 ರವರ ಪರಿಚಯ ಇರುತ್ತದೆ.

ಬೆಳಿಗ್ಗೆ 7.30 ಗಂಟೆಗೆ ನಾನು ಮನೆಯ ಮುಂದಿನ ಅಂಗಳದ ಕಸ ಹೊಡೆಯುತ್ತಿರುವಾಗ ಆರೋಪಿ ನಂ.೧ ಬಂದು ಏ ರಂಡಿ ಇಲ್ಲೇನು ಮಾಡುತ್ತಿದ್ದೀಯಾ ಏನು ಶೆಂಟ ಕಸ ಹೊಡೆಯುತ್ತೀ ಎಂದು ಅವಾಚ್ಯ ಶಬ್ದಗಳಿಂದ ಬೈದು ಅಲ್ಲೇ ಬಿದ್ದಿರುವ ಕಲ್ಲಿನಿಂದ ಎಡಗಣ್ಣಿನ ಕೆಳಗಡೆ ಮತ್ತು ಬಲ ಗಣ್ಣಿನ ಹುಬ್ಬಿನ ಮೇಲೆ ಕಲ್ಲಿನಿಂದ ಹೊಡೆದಿರುತ್ತಾನೆ. ಆರೋಪಿ ನಂ.೨ ನನ್ನ ಗೋಡೆ ಮೇಲೆ ಹಾಕುತ್ತಿರುವ ಪತ್ರಾವನ್ನು ತೆಗೆಸಿದ ಕಾರಣ ಏ ರಂಡಿ ಬೋಸಡಿ ಎಂದು ಕಪಾಳದ ಮೇಲೆ ಹೊಡೆದಿರುತ್ತಾಳೆ. ನನ್ನ ಮೈದುನನಾದ ಚಿದಾನಂದ ಭೂತಾಳಿ ಘೋಡಕೆ ಈತನು ಏ ರಂಡಿ ಬೋಸಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂಧು ಜೀವ ಬೆದರಿಕೆ ಹಾಕಿರುತ್ತಾನೆ. ಭೂಶನ ಘೋಡಕೆ, ಪ್ರವೀಣ ಘೋಡಕೆ, ಮಹಾಂತೇಶ ಘೋಡಕೆ ಈ ಮೂರು ಜನರು ಬಂದು ಏ ರಂಡಿ ಮಕ್ಕಳೆ ಭೋಸಡಿ ಮಕ್ಕಳೆ ಒಂದು ಕೈ ನಿಮ್ಮನ್ನು ನೋಡೇ ಬಿಡುತ್ತೇವೆ ನಿಮ್ಮನ್ನು ಖಲಾಸ ಮಾಡುತ್ತೇವೆ ಎಂದು ಹೇಳಿ ಜೀವ ಬೆದರಿಕೆ ಹಾಕಿರುತ್ತಾರೆ. ಆರೋಪಿ ನಂ.೧ ಏ ರಂಡಿ ನೀನು ನನ್ನ ಹೆಸರಿಗೆ ಬಂದರೆ ನೋಡೇ ಬಿಡುತ್ತೇನೆ, ಎಲ್ಲಿ ಮುರುವು ಚುಚ್ಚಿದರೆ ಬ್ಯಾನಿ ಆಗುತ್ತದ ಅಲ್ಲೇ ಚುಚ್ಚುತ್ತೇನೆ ಎಂದು ಹೇಳಿರುತ್ತಾನೆ. ನಂತರ ನನ್ನನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ನಂತರ ಪೋಲಿಸರು ಊರಿಗೆ ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮು.ಮಾ-೧ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ದಿ.29.09.2021 ರಂದು ಬೆಳಿಗ್ಗೆ 7.00 ಗಂಟೆಗೆ ಘಟನೆ ನಡೆದಿರುತ್ತದೆ ಎಂಧರೆ ಸಾಕ್ಷಿ ನನಗೆ ನಿರ್ದಿಷ್ಟವಾದ ದಿನಾಂಕ, ತಿಂಗಳು, ವರ್ಷ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಘಟನೆಯನ್ನು ಚಾಸಾ-5 ಮತ್ತು 6 ರವರು ಬಿಡಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಘಟನೆ ಸಮಯದಲ್ಲಿ ಫಿರ್ಯಾದಿ ಕೊಡಲು ಹೋದಾಗ ಪೋಲಿಸರು ನೀವು ಅಣ್ಣ ತಮ್ಮಂದಿರು ಇದ್ದೀರಿ ನೀವೇ ಸರಿಪಡಿಸಿಕೊಳ್ಳಿ ಎಂದು ಕಳಿಸಿರುತ್ತಾರೆ. ದಿ. 18.01.2022 ರಂದು ಪೋಲಿಸರಿಗೆ ಫಿರ್ಯಾದಿ ಸಲ್ಲಿಸಿರುತ್ತೇನೆ ಎಂಧರೆ ಸರಿ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-೧ ಎಂದು ಗುರುತಿಸಲಾಯಿತು.

[ ಈ ಹಂತದಲ್ಲಿ ಸ.ಅ.ಅ. ರವರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು ]

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ